

## ಹಿಂದಕ್ಕೆ ಸರಿದ ಮುಂಡ್ಗೆ

ನಮ್ಮ ಅನೇಕ ರೂಢಿ ಸಂಪ್ರದಾಯಗಳು ಅರ್ಥಪೂರ್ಣ ಹಾಗೂ ಮನಸ್ಸಿಗೆ ಮುದ ನೀಡುವಂತಿದ್ದವು. ಆದರೆ ಆಧುನಿಕ ಜೀವನ ಚಕ್ರದಲ್ಲಿ ಅವೆಲ್ಲವೂ ನಶಿಸಿ ಹೋಗುತ್ತಿರುವುದು ಅಷ್ಟೇ ವಿಷಾದನೀಯ. ಮಲೆನಾಡಿನ ಪುರಾತನ ಮನೆಗಳಲ್ಲಿ 'ಮುಂಡ್ಗೆ ಕಂಬ' ಇಲ್ಲದ ಮನೆಗಳನ್ನು ನೋಡಲು ಸಾಧ್ಯವೇ ಇಲ್ಲವೇನೋ.

ಮುಂಡ್ಗೆ ಕಂಬ ಸಾಂಪ್ರದಾಯಿಕ, ಧಾರ್ಮಿಕವಾದ ಆಕರ್ಷಕ ಕಂಬವಾಗಿತ್ತು. ಬೀಟೆ, ಶಿವಣೆ, ಬಿಲ್ಕಂಬಿ, ಹೊನ್ನೆ ಮರಗಳನ್ನು ಬಳಸಿ, ಆಗಿನ ಕಾಲದ ತಂತ್ರಜ್ಞಾನಗಳಲ್ಲಿ ಒಂದಾದ ಕಡಾರ ಬಳಸಿ, ಸುಂದರ ಕೆತ್ತನೆಯೊಂದಿಗೆ ಮುಂಡ್ಗೆ ಕಂಬವನ್ನು ತಯಾರಿಸುತ್ತಿದ್ದರು. ಅದರ ತಲೆಯ ಮೇಲೆ ಪ್ರತಿ ನಾಲ್ಕು ದಿಕ್ಕುಗಳಿಗೂ ಇರುವಂತೆ ಎರಡು ಅಡಿಯಷ್ಟು ಉದ್ದದ ಮುಂಡಿಗೆ ಇಡುತ್ತಿದ್ದರು. ಮನೆಯ ಭಾರ ಹೊತ್ತ ನಾಲ್ಕು ತೊಲೆಗಳ ಸಮ್ಮಿಲನ ಮುಂಡ್ಗೆ ಕಂಬದ ಮೇಲಿರುತ್ತಿತ್ತು.

ತಲೆ ಮೇಲೆ ಮುಂಡ್ಗೆ ಹೊತ್ತಿರುವುದರಿಂದ ಇದಕ್ಕೆ ಮುಂಡ್ಗೆ ಕಂಬ ಎಂಬ ಹೆಸರು ಬಂದಿದೆ. ಜೋಡು ಜಗಲಿ ಇರುವ ಭವಂತಿ ಜಗಲಿಯ ಮಧ್ಯ ಭಾಗದಲ್ಲಿ ಮುಂಡ್ಗೆ ಕಂಬ ಇರುತ್ತಿತ್ತು. ಮುಂಡ್ಗೆ ಕಂಬ ಹಾಗೂ ಮನೆಯ ಪ್ರಧಾನ ಬಾಗಿಲನ್ನು ಏಕಕಾಲದಲ್ಲಿ ನೋಡುವಂತೆ ಮನೆಯ ನಿರ್ಮಾಣ ಮಾಡುತ್ತಿದ್ದರು. ಮನೆಯ ಒಳಗೆ ಭೂತ ಪಿಶಾಚಿಗಳು ಬರಬಾರದು ಎಂಬ ಕಾರಣಕ್ಕೆ ಈ ಕಂಬಕ್ಕೆ ಗಮಯನ ಕೋಡುಗಳನ್ನು ಅಲಂಕಾರಿಕವಾಗಿ ಕಟ್ಟಿಸಿ ಅಂಟಿಸಿ ಇಡುತ್ತಿದ್ದರು. ಈ ಕಂಬಕ್ಕೆ ದೀಪಾವಳಿ ಹಾಗೂ ಹೊಸ್ತಿನ (ತೆನೆ ಹಬ್ಬ) ಹಬ್ಬಗಳಲ್ಲಿ ವಿಶೇಷ ಪೂಜೆ ನಡೆಯುತ್ತಿತ್ತು. ಈ ಕಂಬಕ್ಕೆ ಮನೆಯ ಯಜಮಾನ ಮಾತ್ರ ಚಾಚಿ ಕೂಡಬಹುದಿತ್ತು. ಈಗ ಆರ್.ಸಿ.ಸಿ. ಮನೆಗಳ ಆಗಮನದಿಂದಾಗಿ ಇವು ಮಾಯವಾಗುತ್ತಿರುವುದು ಬೇಸರದ ಸಂಗತಿ.

–ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ

## ಡಚ್ಚರ ಕಾಲದ ಫ್ಯಾನ್

ವಿದ್ಯುತ್ ಆವಿಷ್ಕಾರಕ್ಕೂ ಮುನ್ನ ಬಳಕೆಯಲ್ಲಿದ್ದುದು ಬೀಸಣಿಕೆ (ಹ್ಯಾಂಡ್ ಫ್ಯಾನ್). ಚೀನಾ ಮತ್ತು ಟಿಬೆಟಿಯನ್ನರು ಪರಿಚಯಿಸಿದ ಬೀಸಣಿಕೆ ನಮ್ಮೆಲ್ಲರಿಗೂ ಗೊತ್ತು. ಹೀಗೊಂದು ವಿಶೇಷವಾದ, ಡಚ್ಚರ ಕಾಲದಲ್ಲಿ ಬಳಸುತ್ತಿದ್ದ ಫ್ಯಾನ್ ಕಂಡುಬಂದಿದ್ದು, ಕೇರಳದ ಫೋರ್ಟ್ ಕೊಚ್ಚಿಯಲ್ಲಿನ ಬ್ರಂಟನ್ ಬೋಟ್ಯಾರ್ಡ್ ಎಂಬ ಹೋಟೆಲ್ ಆವರಣದಲ್ಲಿ. ಅಗಲವಾದ ಮರದ ಹಲಗೆಯ ಪಟ್ಟಿಗೆ ಬಟ್ಟೆ ಕಟ್ಟಿ, ಪಟ್ಟಿಯನ್ನು ಹಗ್ಗಗಳ ಮೂಲಕ ನೇತುಬಿಟ್ಟು, ಹಗ್ಗದ ಹಿಡಿಕೆಯನ್ನು ಹಿಂದೆ ನಿಂತು ಎಳೆಯುತ್ತಾ ಗಾಳಿ ಬೀಸುವುದು ಈ ಪಂಖ ಬಳಸುವ ಪರಿ. ಸುಮಾರು ಇಪ್ಪತ್ನಾಲ್ಕು ವರ್ಷಗಳಷ್ಟು ಹಳೆಯದಾದ ಈ ಹೋಟೇಲ್‌ನಲ್ಲಿ ಡಚ್ ಕಾಲದ ಇಂತಹ ಹಲವು ವಸ್ತು ಮತ್ತು ವಿಷಯಗಳ ಸಂಗ್ರಹವೇ ಇದೆ. ಅಲಂಕಾರಕ್ಕೆ ಮಾತ್ರವಾಗಿರದೆ ಮಾಹಿತಿಯುಕ್ತ ಜಾಗ ಇದಾಗಿದೆ.

–ಬಿಂದು ಪಿ., ಬೆಂಗಳೂರು




### ನೀವೂ ಬರೆಯಿರಿ

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

**ವಿಳಾಸ:** editorsu@sudha.co.in

@SudhaWeekly